ಡಿಡಬ್ಲ್ಯೂ- 01 ಓ.ಎಸ್. ನಂಃ 334/2013

ದಿನಾಂಕಃ **24.01.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃಃ **ಶ್ರೀ.ಸಿ.ಕೆ.ವಿ ವಕೀಲರಿಂದ**

ನಾನು ಸದರಿ ಸ್ವತ್ತನ್ನು ಪ್ರತಿವಾದಿಯ ಮೇಲೆ ಹೂಡಿರುತ್ತೇನೆ. ನಾನು ಎಷ್ಟು ದಾವಾ ಸ್ವತ್ತುಗಳ ಮೇಲೆ ದಾವೆಯನ್ನು ಹೂಡಿರುತ್ತೇನೆ ಎಂದರೆ ಸುಮಾರು 10 ರಿಂದ 12 ಎಕರೆ ಜಮೀನಿನ ಮೇಲೆ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಐಟಂ.8 ರಲ್ಲಿ ಕಂಡುಬರುವ ಸನಂ.393/1 ನ್ನು ಪ್ರತಿವಾದಿ 3 ರವರು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಕ್ರಯವನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಪ್ರತಿವಾದಿ 3 ರವರು ಕ್ರಯಕ್ಕೆ ಪಡೆದಿರುವ ವಿಷಯ ನನ್ನ ಅಣ್ಣನಾದ ಪ್ರತಿವಾದಿ 1 ರವರ ಮುಖಾಂತರ ಕೇಸು ಹಾಕುವ ಸಮಯದಲ್ಲಿ ತಿಳಿದುಬಂದಿತು. ಸದರಿ ಕ್ರಯದ ವಿಷಯ ನನಗೆ ಕೇಸು ಹಾಕುವಾಗ ಗೊತ್ತಾಯಿತು. ಸದರಿ ವಿಷಯ ತಿಳಿದ ಬಳಿಕ ನಾನು ಪ್ರತಿವಾದಿ 3 ರವರನ್ನು ಹೋಗಿ ಪ್ರಶ್ನೆ ಮಾಡಿಲ್ಲ. ಐಟಂ. ನಂ.8 ನ್ನು ಖರೀದಿಮಾಡಿದ ದಿನದಿಂದಲೂ ಪ್ರತಿವಾದಿ 3 ರವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಅದರಲ್ಲಿ ರೇಷ್ಮೆ ಬೆಳೆಯನ್ನು ಇಟ್ಟಿರುತ್ತಾರೆ ಎಂದರೆ ಸರಿ. ನನಗೆ ಮದುವೆ ಆಗಿ ಸುಮಾರು 30 ರಿಂದ 35 ವರ್ಷ ಆಗಿರುತ್ತದೆ. ಮದುವೆ ಆದಾಗಿನಿಂದಲೂ ನಾನು ಗಂಡನ ಮನೆಯಲ್ಲಿಯೇ ಇರುತ್ತೇನೆ ಎಂದರೆ ಸರಿ.

ನಾನು ಮತ್ತು ಪ್ರತಿವಾದಿ 1 ರವರು ನನ್ನ ಮದುವೆ ಆದ ನಂತರವೂ ಕೂಡ ಅನ್ಯೋನ್ಯವಾಗಿ ಇದ್ದೆವು ಆದರೆ ಪ್ರತಿವಾದಿ 1 ರವರು ಪ್ರತಿವಾದಿ 3 ರವರಿಗೆ ಐಟಂ ನಂ.8 ನ್ನು ಮಾರಾಟ ಮಾಡಿದ ನಂತರ ನನ್ನ ಮತ್ತು ಅವರ ನಡುವೆ ವೈ ಮನಸ್ಸು ಶುರುವಾಯಿತು. ನಾನು ಮದುವೆ ಆದ ಬಳಿಕ ನಾನು ನನ್ನ ತವರು ಮನೆಗೆ ಆಗಾಗ ಭೇಟಿ ನೀಡುತ್ತಿದ್ದೆ ಪ್ರತಿವಾದಿ 1 ರವರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ನಾನು ಮದುವೆ ಆಗುವ ಸಮಯದಲ್ಲಿ ಮನೆಯ ವ್ಯವಹಾರವನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ಸುಮಾರು 7 ಗಿಂದ 10 ವರ್ಷ ಗಳ ಹಿಂದೆ ನಿಧನರಾಗಿರುತ್ತಾರೆ. ಐಟಂ ನಂ.8 ಪ್ರತಿವಾದಿ 1 ರವರಿಂದ ಪ್ರತಿವಾದಿ 3 ರವರು ಖರೀದಿ ಮಾಡಿದ ನಂತರ ಅವರ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿ. ಪ್ರತಿವಾದಿ 1 ಐಟಂ ನಂ.8 ನ್ನು ಮಾರುವ ಸಮಯದಲ್ಲಿ ಪ್ರತಿವಾದಿ 1 ಮಾತ್ರ ಏಕಮಾತ್ರ ಪುತ್ರ ಎಂದು ವಂಶವೃಕ್ಷ ಪ್ರಮಾಣ ಪತ್ರವನ್ನು ನೀಡಿ ಪ್ರತಿವಾದಿ 3 ರವರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿ ಆದರೆ ಆ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿ 3 ದಾವಾಸ್ವತ್ತಿನ ಐಟಂ ನಂ.8 ನ್ನು ಖರೀದಿ ಮಾಡುವ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿ 2 ರವರು ಇರುತ್ತಾರೆ ಎನ್ನುವ ವಿಷಯ ಪ್ರತಿವಾದಿ 3 ರವರಿಗೆ ತಿಳಿದಿರಲಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ 3 ರವರಿಗೆ ಗೊತ್ತಿರುತ್ತದೆ ಮತ್ತು ಪ್ರತಿವಾದಿ 1 ಮತ್ತು 2 ರವರು ಒಂದೇ ಮನೆಯಲ್ಲಿ ವಾಸವಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿ 1 ಮತ್ತು 2 ರವರು ಒಟ್ಟಿಗೆ ವಾಸವಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ನಾರಾಯಪ್ಪ ರವರು ನನ್ನ ತಂದೆ ಎಂದು

ತೋರಿಸಲು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನಾನು ಮಳಮಾಚನಹಳ್ಳಿಯಲ್ಲಿ ವಾಸವಿದ್ದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ಪ್ರತಿಾದಿ 2 ರವರು ನಾರಾಯಣಮ್ಮರವರ ಮಗಳು ಮತ್ತು ಅವರು ಮಳಮಾಚನಹಳ್ಳಿಯಲ್ಲಿ ವಾಸವಾಗಿದ್ದಾರೇ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ನನಗೆ ಮದುವೆ ಆಗುವ ಸಮಯದಲ್ಲಿ ನನ್ನ ವಯಸ್ಸು ಸುಮಾರು 19 ರಿಂದ 20 ವರ್ಷ ವಯಸ್ಸಾಗಿತ್ತು. ನಾನು ಮಳಮಾಚನಹಳ್ಳಿಯಲ್ಲಿ ಯಾವುದೇ ಮತದಾನವನ್ನು ಮಾಡಿರುವುದಿಲ್ಲ. ಸದರಿ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ನ್ಯಾಯಾಲಯದ ಮುಂದೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಹೇಳಲು ಬರುವುದಿಲ್ಲ. ಸದರಿ ವ್ಯಾಜ್ಯವನ್ನು ಊರಿನಲ್ಲಿರುವ ಕೆಲವರು ಕೇಸನ್ನು ದಾಖಲಿಸಿದರೆ ನನಗೂ ಕೂಡ ಪಾಲು ಬರುತ್ತದೆ ಎಂದು ಹೇಳದ ಕಾರಣ ವಕೀಲರ ಮುಖಾಂತರ ವ್ಯಾಜ್ಯವನ್ನು ಹೂಡಿರುತ್ತೇನೆ. ನ್ಯಾಯಾಲಯದ ಮುಂದೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಮಳಮಾಚನಹಳ್ಳಿ ನನ್ನ ತಂದೆ ನಾರಾಯಣಪ್ಪರವರಿಗೆ ಸೇರಿದ ಮನೆ ಇದ್ದು ಯಾವುದೇ ನಿವೇಶನಗಳು ಇರುವುದಿಲ್ಲ. ಪ್ರತಿವಾದಿ 2 ರವರು ಮಳಮಾಚನಹಳ್ಳಿಯ ಒಂದು ಮನೆಯಲ್ಲಿ ವಾಸವಾಗಿರುತ್ತಾರೆ ಆ ಆಸ್ತಿಯನ್ನು ನನ್ನ ತಂದೆ ನಾರಾಯಣಪ್ಪರವರು ಪ್ರತಿವಾದಿ 2 ರವರಿಗೆ ಬರೆದುಕೊಟ್ಟಿರುತ್ತಾರೆ.

ಪ್ರತಿವಾದಿ 1 ಮತ್ತು 2 ರವರು ವಾಸವಾಗಿರುವ ಮನೆಗಳನ್ನು ದಾವಾ ಸ್ವತ್ತಿನಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಒಟ್ಟು ಕುಟುಂಬಕ್ಕೆ ಸೇರಿದ ಇನ್ನು ಹಲವೂ ನಿವೇಶನಗಳು ಇದ್ದು ಅವುಗಳನ್ನು ದಾವಾ ಸ್ವತ್ತು ಎಂದು ತೋರಿಸಿಲ್ಲ ಎಂದರೆ ಸಾಕ್ಷಿಯು ಸುಮ್ಮನೆ ನಿಲ್ಲುತ್ತಾರೆ. ಈಗಾಲೇ ನಾನು ಪ್ರತಿವಾದಿ 2 ರವರಿಂದ ನನಗೆ ಬರಬೇಕಾದ ಪಾಲನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ನಾರಾಯಣಪ್ಪ ರವರು ತೀರಿಹೋಗಿದ್ದಾರೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ನಾರಾಯಣಪ್ಪರರಿಗೆ 1 ನೇ ಪ್ರತಿವಾದಿ ಒಬ್ಬನೇ ಮಗ ಎಂದರೆ ಅವರಿಗೆ ಇಬ್ಬರು ಹೆಣ್ಣು ಮಕ್ಕಳು, ಪ್ರತಿವಾದಿ 1 ಗಂಡು ಮಗ ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ಪ್ರತಿವಾದಿ 2 ನಾರಾಯಣಪ್ಪನ ಮಕ್ಕಳಲ್ಲದ ಕಾರಣ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 3 ರವರಿಗೆ ನಾನು ಮತ್ತು ಪ್ರತಿವಾದಿ 2 ರವರು ಇರುವ ವಿಷಯ ದಾವಾ ಸ್ವತ್ತಿನ ಐಟಂ ನಂ.8 ನ್ನು ಕ್ರಯಕ್ಕೆ ಪಡೆದು10 ವರ್ಷಗಳ ನಂತರ ತಿಳಿಯಿತು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ 3 ರವರು ದಾವೆ ಹೂಡುವ ಮುನ್ನ ನನ್ನನ್ನು ನೋಡಿರುತ್ತಾರೆ. ಪ್ರತಿವಾದಿ 3 ರವರಿಗೆ ನಾನು ಇರುವ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 3 ರವರು ಖರೀದಿ ಮಾಡಿದ ಐಟಂ.ನಂ.8 ರ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ ಆದರೆ ಆ ಸ್ವತ್ತು ಎಲ್ಲಿ ಇರುತ್ತದೆ ಎಂದು ನನಗೆ ಗೊತ್ತು. ಊರಿನವರ ಮಾತನ್ನು ಕೇಳಿ ಪ್ರತಿವಾದಿ 3 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಶಿಡ್ಲಘಟ್ಟ